ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಹಾಗೂ ಉಚ್ಚ ಮಾಧ್ಯಮಿಕ ಶಿಕ್ಷಣ ಮಂಡಳ, ಪುಣೆ-4.

# ಕೃತಿ ಪುಸ್ತಕ(Kruti Pustaka)

## ಹತ್ತನೆಯ ಇಯತ್ತೆ(Standard 10th)

ವಿಷಯ: **ಕನ್ನಡ (ಪ್ರಥಮ ಭಾಷೆ)**(Kannada-I Language)



# ಪ್ರಸ್ತಾವನೆ

2015-16 ನೇ ಸಾಲಿನಲ್ಲಿ 9ನೇ ಕನ್ನಡ (ಪ್ರಥಮ/ದ್ವಿತೀಯ ಮತ್ತು ತೃತೀಯ ಮತ್ತು ಸಂಯುಕ್ತ ಭಾಷೆ) ಭಾಷಾ ವಿಷಯದ ಪ್ರಚಲಿತ ಮೌಲ್ಯಮಾಪನ ಪದ್ಧತಿಯಲ್ಲಿ ಪ್ರಚಲಿತ ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಕೃತಿಪತ್ರಿಕೆಯ ಸ್ವರೂಪದಲ್ಲಿ ಪರಿವರ್ತಿಸಿ ಮೌಲ್ಯಮಾಪನ ಪದ್ಧತಿಯಲ್ಲಿ ಬದಲಾವಣೆ ಮಾಡಲಾಗಿದೆ.

ಕನ್ನಡ ಭಾಷೆ ವಿಷಯದ ಪ್ರಚಲಿತ ಪಠ್ಯಪುಸ್ತಕ ಬದಲಿಸದೇ ಕೇವಲ ಮೌಲ್ಯಮಾಪನ ಪದ್ಧತಿಯಲ್ಲಿ ಪ್ರಶ್ನೆಪತ್ರಿಕೆಯಿಂದ ಕೃತಿಪತ್ರಿಕೆಯ ಕಡೆಗೆ ಎಂಬ ಬದಲಾವಣೆ ಮಾಡಲಾಗಿದೆ. ಈ ಬದಲಾವಣೆಯು ಕಂಠಪಾಠದಿಂದ - ಆನಂದದಿಂದ ಕೂಡಿದ ಮತ್ತು ಕೃತಿಶೀಲ ಬೋಧನೆಯ ಕಡೆಗೆ ಹೊರಳುವಂತೆ ಮಾಡುತ್ತದೆ.

ಈ ಬದಲಾವಣೆಯನ್ನು 10ನೇ ಇಯತ್ತೆಗಾಗಿ 2016-17ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲಾಗಿದೆ. ಮಾರ್ಚ 2017ರ 10ನೇ ಇಯತ್ತೆಯ ಎಸ್. ಎಸ್. ಸಿ. ಬೋರ್ಡಿನ ಪರೀಕ್ಷೆಯ ಪ್ರಶ್ನೆಪತ್ರಿಕೆಯು ಕೃತಿಪತ್ರಿಕೆಯ ಸ್ವರೂಪದಲ್ಲಿ ಇರುವುದು.

ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸದಲ್ಲಿ ಭಾಷೆಯ ಸ್ಥಾನವು ಮಹತ್ವದ್ದಾಗಿದೆ. ಕನ್ನಡ ಭಾಷೆಯ ಅಭ್ಯಾಸ ಮಾಡುವಾಗ ಕೇವಲ ಸಾಹಿತ್ಯದ ಅಭ್ಯಾಸ ಎಂದರೆ ಗದ್ಯ, ಪದ್ಯ, ಸ್ಥೂಲವಾಚನ, ವ್ಯಾಕರಣಕ್ಕೆ ಮಾತ್ರ ಸೀಮಿತವಾಗಿರದೆ, ವಿದ್ಯಾರ್ಥಿಗಳು ಭಾಷೆಯನ್ನು ನಿಜ ಜೀವನದೊಂದಿಗೆ ಅಳವಡಿಸಿಕೊಳ್ಳಲು ಕಲಿಯಬೇಕು. ಭಾಷೆಯ ವಿವಿಧ ಆಯಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಾಗ ವ್ಯವಹಾರಿಕ ಜೀವನದಲ್ಲಿಯ ಭಾಷೆಯ ಮಹತ್ವ ಮತ್ತು ಭಾಷೆಯ ವ್ಯವಹಾರಿಕ ಉಪಯೋಗಗಳಿಗೆ ವಿದ್ಯಾರ್ಥಿಗಳ ಭಾಷೆಯ ವಿಕಾಸವು ತುಂಬಾ ಪ್ರಮುಖವೆನಿಸುತ್ತದೆ.

ಪ್ರಚಲಿತ ಮೌಲ್ಯಮಾಪನ ಪದ್ಧತಿಯಲ್ಲಿ ಪ್ರಶ್ನೋತ್ತರ ಪದ್ಧತಿಯು ಮುಖ್ಯವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಬಾಯಿಪಾಠದ ಮೇಲೆ ಆಧರಿಸಿದ ಉತ್ತರಗಳನ್ನು ಬರೆಯುವ ರೂಢಿಯಾಗಿರುತ್ತದೆ. ಈ ಸಂಗತಿಯು ವಿದ್ಯಾರ್ಥಿಗಳ ಭಾಷೆಯ ಪ್ರಗತಿ, ಸಮೃದ್ಧಿ, ಅಭಿವ್ಯಕ್ತಿ ಮತ್ತು ವ್ಯವಹಾರದಲ್ಲಿ ಭಾಷೆಯ ಯೋಗ್ಯ ಬಳಕೆಗೆ ತಡೆಯುಂಟು ಮಾಡುತ್ತಿದೆ. ಇದರ ಬದಲಾಗಿ ಭಾಷಾ ವಿಷಯದ ಅಧ್ಯಯನವು ಭಾಷೆಯ ಸಮೃದ್ಧಿಗಾಗಿ ಬೋಧನೆ - ಕಲಿಕೆಯ ಪ್ರಕ್ರಿಯೆಯಲ್ಲಿ ಬದಲಾವಣೆ ತರುವುದಕ್ಕಾಗಿ ಮೌಲ್ಯಮಾಪನ ಪದ್ಧತಿಯಲ್ಲಿ ಪ್ರಸಕ್ತ ಬದಲಾವಣೆಯನ್ನು ತರಲಾಗಿದೆ.

ಈ ಬದಲಾವಣೆಯಿಂದಾಗಿ ಶಿಕ್ಷಕರಿಗೂ ಬೇರೆ ಪರ್ಯಾಯ ಉಳಿಯದೇ ಪಾರಂಪರಿಕ ಅಧ್ಯಾಪನ ಪದ್ಧತಿಯಿಂದ ಹೊರಬಂದು ಜ್ಞಾನರಚನೆಯ ವಿಚಾರ ಪ್ರಣಾಳಿಯನ್ನು ಅನುಸರಿಸಿ ಸ್ವಯಂ ಅಧ್ಯಯನದ ಆಧಾರದಿಂದ ಕೃತಿಶೀಲ ಅಧ್ಯಯನದ ಪದ್ಧತಿಯನ್ನು ಅನುಸರಿಸಲೇಬೇಕಾಗುವುದು. ಇದರಿಂದಾಗಿ ಮೌಲ್ಯಮಾಪನದಲ್ಲಿಯ ಬದಲಾವಣೆಗೆ ಅನುಸರಿಸಿ ಅಧ್ಯಯನ - ಬೋಧನೆಗಳಲ್ಲಿ ಯಾವುದೇ ಒತ್ತಡವಿರದ 'ಕೃತಿ ಆಧಾರಿತ ಅಧ್ಯಯನ '(ABL) ಉತ್ತಮವಾಗಿ ಸುಲಭವಾಗಿ ಆಗಬಲ್ಲದು. ಭಾಷಾ ವಿಷಯದಲ್ಲಿ ಸಿಗುವ ಗುಣಗಳಿಗಿಂತ, ವಿದ್ಯಾರ್ಥಿಗಳು ಭಾಷೆಯನ್ನು ತಿಳಿದುಕೊಂಡಿರುವರು. ಕ್ಷಮತೆ ಕೌಶಲ್ಯಗಳನ್ನು ತಿಳಿದುಕೊಂಡಿರುವರು ಎಂಬುದರ ಮೌಲ್ಯಮಾಪನ ಆಗಬೇಕೆಂಬುದೇ ಈ ಬದಲಾವಣೆಯ ಉದ್ದೇಶವಾಗಿದೆ.

**ಬದಲಾವಣೆಯ ಸ್ವರೂಪ :-**

ಪ್ರಶ್ನೆ ಪತ್ರಿಕೆಯ ಸ್ವರೂಪ ಬದಲಾಯಿಸಿ ಅದನ್ನು ಈಗ ಕೃತಿಪತ್ರಿಕೆ ಮಾಡಲಾಗಿದೆ. ಆದರೆ ಪಠ್ಯಪುಸ್ತಕದ ಸ್ವರೂಪ ಬದಲಾಗಿಲ್ಲ. (20 ಗುಣಗಳ ಮೌಖಿಕ ಪರೀಕ್ಷೆಯ ಸ್ವರೂಪದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.)

ಪಠ್ಯಪುಸ್ತಕದ ಪಾಠದ ಕೊನೆಗೆ ಇರುವ ಸ್ವಾಧ್ಯಾಯದ ರೂಪ ಬದಲಾಗಿದೆ. ಆದರೆ ಅದನ್ನು ತೆಗೆದು ಹಾಕಿಲ್ಲ, ಅದರಂತೆಯೇ ವ್ಯಾಕರಣ, ಭಾಷಾಭ್ಯಾಸ, ವಾಚನ, ಉಪಕ್ರಮಗಳೂ ಹಾಗೇ ಉಳಿಯಲಿವೆ. ಅವುಗಳೊಂದಿಗೆ ಸ್ವಂತ ಅಭಿಪ್ರಾಯಗಳನ್ನು ಒಳಗೊಂಡ ಕೃತಿಗಳ ಮೇಲೆ ಒತ್ತು ಕೊಡಲಾಗಿದೆ. ವಿದ್ಯಾರ್ಥಿಗಳು ಪಠ್ಯಪುಸ್ತಕವನ್ನು ಪೂರ್ಣ ಗಮನಕೊಟ್ಟು ಓದಿ ಅದರ ಅರ್ಥ ತಿಳಿದುಕೊಂಡು ವಿಷಯಕ್ಕನುಸರಿಸಿ ಜ್ಞಾನದ ಸಂಪೂರ್ಣ ಮಾಹಿತಿ ತಿಳಿದುಕೊಂಡು ಕೂಲಂಕುಷವಾಗಿ ವಿಚಾರಮಾಡಿ ಸ್ವಂತ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಗಬೇಕೆಂಬುದೇ ಇದರ ಉದ್ದೇಶ.

**ಕೃತಿ ಪುಸ್ತಕದ ಸ್ವರೂಪ :-**

ಕೂಲಂಕುಷವಾಗಿ ಅಭ್ಯಾಸ ಮಾಡುವ ದೃಷ್ಟಿಕೋನದಿಂದಲೇ ಪ್ರಾತಿನಿಧಿಕ ಸ್ವರೂಪದಲ್ಲಿ ಮಾರ್ಗದರ್ಶನ, ದಿಕ್ಕು ನಿಶ್ಚಿತ ಪಡಿಸಲು ಈ ಕೃತಿಗಳ ಸಂಗ್ರಹ/ಪುಸ್ತಕವನ್ನು ತಯಾರಿಸಲಾಗಿದೆ. ಎಲ್ಲ ಕೃತಿಗಳು ಪಠ್ಯಪುಸ್ತಕದಲ್ಲಿಯ ಘಟಕಗಳ ಮೇಲೆಯೇ ಆಧಾರಿತವಾಗಿವೆ. ಇದರಲ್ಲಿ ಕೃತಿಗಳ ಪಟ್ಟಿ  ಹಾಗೂ ನಮೂನೆ ಕೃತಿಪತ್ರಿಕೆಗಳನ್ನು ಕೊಡಲಾಗಿದೆ. ಅವುಗಳನ್ನು ಮಾದರಿಯಾಗಿಟ್ಟುಕೊಂಡು ಶಿಕ್ಷಕರು ಸ್ವತಃದ ವಿಚಾರಗಳಿಂದ ಅನೇಕ ಪ್ರಕಾರದ ಕೃತಿಗಳನ್ನು ತಯಾರಿಸಬೇಕು. ನಮೂನೆ ಕೃತಿಪತ್ರಿಕೆಯು ಉದಾಹರಣೆಗಾಗಿ ಇದೆ. ಅದರಲ್ಲಿ ಶಿಕ್ಷಕರು ವೈವಿಧ್ಯತೆ ತರಬೇಕೆಂಬ ಅಪೇಕ್ಷೆ ಇದೆ. ಈ ವಿವಿಧ ಕೃತಿಗಳನ್ನು ಮಾಡುವಾಗ ಆನಂದದ ಅನುಭವ ನೀಡಬೇಕು. ಪ್ರಮುಖವಾಗಿ ಈ ಕೃತಿಗಳನ್ನು ತಯಾರಿಸುವಾಗ ಭಾಷೆಯ ಉದ್ದೇಶ ಹಾಗೂ ಕೌಶಲ್ಯಗಳ ಮೌಲ್ಯಮಾಪನ ಮಾಡುವುದರಿಂದ ಆ ಕೃತಿಗಳು ಯೋಗ್ಯ ಮಾರ್ಗದರ್ಶನ ಮಾಡುವಂತಿರಬೇಕು.

ಕೃತಿಪುಸ್ತಕದಲ್ಲಿ ಗದ್ಯ, ಪದ್ಯ, ಸ್ಥೂಲವಾಚನ, ವ್ಯಾಕರಣ, ಉಪಯೋಜಿತ ಲೇಖನ, ಅಪಠಿತ ಗದ್ಯ ಈ ಘಟಕಗಳು ಪ್ರಾತಿನಿಧಿಕ ಸ್ವರೂಪದಲ್ಲಿವೆ. ಕೃತಿಪತ್ರಿಕೆಯಲ್ಲಿ ಪೂರ್ವಜ್ಞಾನದ ಮೇಲೆ ಆಧರಿಸಿದ ಕೃತಿಗಳ ಅಂತರ್ಭಾವ ಇರಬೇಕು. 1 ರಿಂದ 9 ಇಯತ್ತೆವರೆಗಿನ ವ್ಯಾಕರಣವು ಭಾಷಾ ವಿಕಾಸದ ದೃಷ್ಟಿಯಿಂದ ಉಜಳಣಿಯ ರೂಪದಲ್ಲಿ ಅಳವಡಿಸಿಕೊಳ್ಳಬೇಕು.

**ಮಹತ್ವದ ಭಾಗ:**

ಮಾಧ್ಯಮವೆಂದು ದೈನಂದಿನ ಜೀವನದ ವ್ಯವಹಾರದಲ್ಲಿ ಭಾಷೆಗೆ ಬಹಳ ಮಹತ್ವವಿದೆ. ವ್ಯಾಪಾರ, ಉದ್ಯೋಗ ಮುಂತಾದ ವ್ಯವಹಾರಗಳಲ್ಲಿ ಕನ್ನಡ ಭಾಷೆಯನ್ನು ಹೇರಳವಾಗಿ ಬಳಸುತ್ತಾರೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಕೃತಿಪತ್ರಿಕೆಯಲ್ಲಿ 58% ಒತ್ತನ್ನು ಬರವಣಿಗೆ ಕೌಶಲ್ಯಕ್ಕೆ (ಉಪಯೋಜಿತ ಲೇಖನ) ನೀಡಲಾಗಿದೆ.

ಕೃತಿಪತ್ರಿಕೆಯ ನಮೂನೆಯಂತೆ ಎಲ್ಲ ಪ್ರಕಾರದ ಕೃತಿಗಳ ವೈವಿಧ್ಯತೆಯನ್ನು ವರ್ಗದಲ್ಲಿಯ ಬೋಧನೆಯಲ್ಲಿ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ ಶಿಕ್ಷಕರು ಸ್ವತಃ ಎಚ್ಚರಿಕೆಯಿಂದ ಪ್ರಯತ್ನ ಮಾಡಬೇಕು ಹಾಗೂ ಕೃತಿ ಮಾಡಲು ವಿದ್ಯಾರ್ಥಿಗಳಿಗೂ ಹುರಿದುಂಬಿಸಬೇಕು. ಇದಕ್ಕಾಗಿ ಬೋಧನಾ ಪದ್ಧತಿಯಲ್ಲೂ ಬದಲಾವಣೆ ತರಬೇಕು. ಕೃತಿಪತ್ರಿಕೆಯಲ್ಲಿ ಗದ್ಯ-ಪದ್ಯಗಳ ಅಂಶಗಳು ಇದ್ದರೂ ಸಂಪೂರ್ಣ ಪಾಠದ ಅಧ್ಯಯನ - ಬೋಧನೆ ಆಗುವುದು ಅತ್ಯಂತ ಮಹತ್ವದ್ದಾಗಿದೆ.

ಪರೀಕ್ಷಾ ಪದ್ಧತಿಯಿಂದ ಬಾಯಿಪಾಠ ಮಾಡುವ ಶೂರರನ್ನು ತಯಾರಿಸುವುದನ್ನು ನಿಲ್ಲಿಸಿ ಭಾಷೆ, ಸಾಹಿತ್ಯ, ತಿಳುವಳಿಕೆಯುಳ್ಳ ಭಾಷಾ ಪ್ರೇಮಿಗಳಿಂದ ಭಾಷೆಯ ಅಭ್ಯಾಸಕರನ್ನು ನಿರ್ಮಿಸುವುದೇ ಈ ಬದಲಾವಣೆಯನ್ನು ಸ್ವೀಕರಿಸುವ ಪ್ರಮುಖ ಉದ್ದೇಶವಾಗಿದೆ. ಕೃತಿ ಪತ್ರಿಕೆಯಲ್ಲಿಯ ಭಾಗಗಳನ್ನು ಓದುವಾಗ ಮಹತ್ವದ ಅಂಶ ಯಾವುದು ಎಂಬುದನ್ನು ವಿಶ್ಲೇಷಿಸುವ ಕೌಶಲ್ಯ ಪ್ರಾಪ್ತವಾಗುವುದು ಅವಶ್ಯವಾಗಿದೆ.

ವಿದ್ಯಾರ್ಥಿಗಳಿಗೆ ಸಿಕ್ಕ ಮಾಹಿತಿ ಬೇರೆ ಬೇರೆ ಪ್ರಕಾರದ ಲೇಖನದಲ್ಲಿ ಉಪಯೋಗ ಮಾಡಲು ತಿಳಿಯಬೇಕು. ಆಗಲೇ ಅವರಲ್ಲಿ ಕುಶಲತೆ ದೊರಕಬಲ್ಲದು. ಕಂಠಪಾಠ ಮಾಡದೇ ಕೃತಿಶೀಲತೆ, ಪ್ರತ್ಯಕ್ಷ ಉಪಾಯ ಹುಡುಕುವುದಕ್ಕೆ ಪ್ರಾಧಾನ್ಯ ನೀಡುವ ಈ ಕೃತಿಗಳ ಅಭ್ಯಾಸವನ್ನು ವಿದ್ಯಾರ್ಥಿಗಳು ನಿಶ್ಚಿತವಾಗಿಯೂ ಆನಂದದಿಂದ ಸ್ವೀಕರಿಸುವರು.

ಕನ್ನಡ ಭಾಷೆಯ ಸಮೃದ್ಧಿ ಹಾಗೂ ವಿಕಾಸಕ್ಕಾಗಿ ಅಭ್ಯಾಸ, ಕೃತಿಶೀಲತೆ, ಆನಂದ ನೀಡುವ, ಸ್ವಯಂ ಅಧ್ಯಯನಕ್ಕೆ ಒತ್ತು ನೀಡುವ ಬೋಧನಾ ಪದ್ಧತಿ ವಿದ್ಯಾರ್ಥಿಗಳಿಗೆ ಆನಂದ ನೀಡಿ ಅವರ ಸೃಜನಶೀಲತೆ, ವಿಚಾರಶಕ್ತಿ, ಕೃತಿಶಕ್ತಿ ಹಾಗೂ ಅಭಿವ್ಯಕ್ತಿಗೆ ಚಾಲನೆ ನೀಡಬಲ್ಲದೆಂಬ ವಿಶ್ವಾಸವಿದೆ. ಈ ಬದಲಾವಣೆಯನ್ನು ಸ್ವೀಕರಿಸುವ ನಿಮ್ಮಲ್ಲಿಯ ಸೃಜನಶೀಲ ಶಿಕ್ಷಕ ಪ್ರತಿಭೆಗೂ ನಾವು ಶುಭ ಕೋರುವೆವು.


**ಶ್ರೀ. ಸದಾನಂದ ಟಿ. ವಿ.**

**ಸಹ ನಿಮಂತ್ರಕರು**

**ಸಹಕಾರ – ಕನ್ನಡ ವಿಷಯ ಅಭ್ಯಾಸ ಮಂಡಳ**
**ಮತ್ತು ಸಂಪಾದನ ಸಮಿತಿಯ ಸದಸ್ಯರು.**


## ಅನುಕ್ರಮಣಿಕೆ


| | |
|---|---|
| 1. ಕೃತಿ | 1 |
| 2. ರೂಪರೇಷೆ (ಆರಾಖಡಾ) | 1 |
| 3. ಕೃತಿ ಪತ್ರಿಕೆಯ ನಮೂನೆ | 1 |
| 4. ಮೌಲ್ಯಮಾಪನ ಪದ್ಧತಿ | 2ರಿಂದ 9 |
| 5. ಕೃತಿಗಳ ನಮೂನೆಗಳು | 10 ರಿಂದ 27 |